International Journal of Kannada Research
www.kannadajournal.com

ISSN: 2454–5813
IJKR 2019; 5(1): 01-02
© 2019 IJKR
www.kannadajournal.com
Received: 01-11-2018
Accepted: 04-12-2018

**ವಿಶ್ವನಾಥಯ್ಯ**
ತಂ/ ಸಿದ್ಧಲಿಂಗಯ್ಯ ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ ಕರ್ನಾಟಕ ಭಾರತ.

**Correspondence**
**ವಿಶ್ವನಾಥಯ್ಯ**
ತಂ/ ಸಿದ್ಧಲಿಂಗಯ್ಯಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ ಕರ್ನಾಟಕ ಭಾರತ.

# ಕುಳಗೇರಿ ಶಾಸನಗಳು ಕುರಿತು ಸೀತಾರಾಮ್ ಜಾಗಿರದಾರರ ಅವಲೋಕನ

**ವಿಶ್ವನಾಥಯ್ಯ**

ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲೂಕಿನ ಪುಟ್ಟ ಗ್ರಾಮವೇ ಕುಳಗೇರಿ. ಹಿಂದೆ ಇದು ದೊಡ್ಡ ಪಟ್ಟಣ ಅಂದರೆ ಭತ್ತಗ್ರಾಮ, ಅಗ್ರಹಾರವೆನಿಸಿತ್ತು. ಇದೊಂದೇ ಗ್ರಾಮದಲ್ಲಿ ಸುಮಾರು 27 ಶಾಸನಗಳು ಈವರೆಗೆ ದೊರಕಿವೆ. ಕುಳಗೇರು ಶಾಸನಗಳ ಕುರಿತು ಮೆಕಂಜಿ ಸೇರಿದಂತೆ ಅನೇಕ ವಿದ್ವಾಂಸರು ಅಧ್ಯಯನಗೈದಿದ್ದಾರೆ. ಇಲ್ಲಿನ ಕ್ರಿ.ಶ. 1105ರ ಶಾಸನವನ್ನು ಮೆಕಂಜಿ ಸಂಗ್ರಹಿಸಿದ್ದಾರೆ.

ಕ್ರಿ.ಶ.1105ರ ಶಾಸನದಲ್ಲಿ "ಶ್ರೀ ಮನ್ಮಾಳಲ ದೇವಿಯರು ತಂಮ್ಮಾಕ್ಕೆ ಭತ್ತಗ್ರಾಮ ಕುಣಿಲಂಗೆರೆಯ ಹಂಪಕವಿಯ ಮಗ(ಮಹಾ)ದೇವನ ಹೊಕ್ಕಣಿಯ ಧರ್ಮಕ್ಕೆ ಧಾರಾಪೂರ್ವ್ವಕ....." ಎಂದು ಹೇಳಿದೆ. ಇಲ್ಲಿನ ಶಾಸನೋಕ್ತ ಹಂಪಕವಿಯು ಅಭಿನವ ಪಂಪ(ಹಂಪ>ಪಂಪ)ನಾಗಚಂದ್ರನೇ ಎಂದು ಸೀತಾರಾಮ್ ಜಾಗಿರದಾರರು ಸಾಧಿಸಿತೋರಿಸಿದ್ದಾರೆ.[1]

ಶ್ರೀಮತಿ ಹನುಮಾಕ್ಷಿ ಗೋಗಿಯವರು ಮೆಕಂಜಿ ಸಂಗ್ರಹಿಸಿದ ಕ್ರಿ.ಶ.1105ರ ಶಾಸನವೂ ಸೇರಿದಂತೆ ಒಟ್ಟು 27 ಶಾಸನಗಳನ್ನು ತಮ್ಮ "ಕಲಬುರ್ಗಿ ಜಿಲ್ಲೆ ಶಾಸನಗಳು" ಕೃತಿಯಲ್ಲಿ ಸಂಪಾದಿಸಿ ಶಾಸನ ಸಾಹಿತ್ಯ ಲೋಕಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿದ್ದಾರೆ.[2]

ಕುಳಗೇರಿಯ ಕುರಿತು ಹಲವು ಶಾಸನಗಳಲ್ಲಿ ಅಗ್ರಹಾರ, ಭತ್ತಗ್ರಾಮ, ಅನುಪಮ ವಿದ್ಯಾಸ್ಥಾನ, ಪಟ್ಟಣಂ, ಮಹಾಘಟಿಕಾಸ್ಥಾನ ಎಂದೆಲ್ಲ ಉಲ್ಲೇಖಿಗೊಂಡಿವೆ. ಅಂದರೆ ಇದು ಬಹುದೊಡ್ಡ ಪಟ್ಟಣವಾಗಿತ್ತೆಂಬುದರಲ್ಲಿ ಸಂಶಯವಿಲ್ಲ.

ಈ ಕುಳಗೇರಿ ಗ್ರಾಮನಾಮವನ್ನು ಸೀತಾರಾಮ ಜಾಗಿರದಾರರು ಹೀಗೆ ವಿವರಿಸಿದ್ದಾರೆ. ಕುಣಿಲಂ+ಕೆರೆ(ಕುಣಲಿನಗರೆ) ಎಂದು ವಿಗ್ರಹಿಸಿದರೆ ಕುಣಿಲ್ ಎಂಬ ಶಬ್ದ ಮೂಲ ರೂಪದಲ್ಲಿ ನಮ್ಮ ಮುಂದೆ ನಿಲ್ಲುತ್ತದೆ. ಈಗಲೂ ದೊಡ್ಡಹಳ್ಳದಿಂದ ಕೆರೆಯಂಗಳಕ್ಕೆ ನೀರನ್ನು ಹರಿಸಿದ "ಕಲ್ಲಿನಕುಣಿಲ್" ಅಲ್ಲಿ ಇಲ್ಲಿ ಭಗ್ನಾವಸ್ಥೆಯಲ್ಲಿ ಉಳಿದು ಬಂದಿರುವುದನ್ನು ಕಾಣಬಹುದು. ಎಂದರೆ ಕಲ್ಲಿನ ಕಾಲುವೆ ಮುಖಾಂತರ ಕೆರೆಗೆ ಹಳ್ಳದಿಂದ ನೀರನ್ನು ಹರಿಸಿದರು. ನೆಲದಲ್ಲಿ ನೀರು ಬಾರದೆ ಇದ್ದಾಗ ದಾರಿಯಲ್ಲೇ ನೀರು ಇಂಗಿ ಹೋದಾಗ ನೀರನ್ನು ಕಲ್ಲಿನಮೋರಿ ಅಥವಾ ಕಲ್ಲಿನ ನಾಲೆಯನ್ನು ನಿರ್ಮಿಸಿ ಕೆರೆಗೆ ಹರಿದು ಬರುವಂತೆ ಮಾಡಿದ್ದಾರೆ. ಕುಣಿಲಿನಿಂದ ನಿರ್ಮಿಸಿದ ಕರೆಯೇ ಕುಣಿಲಂಗೆರೆಯಾಗಿದೆ. ಕುಣಿಲಗೆರೆ>ಕುಳಗೆರೆ>ಕುಳಗೇರಿ ಆಗಿದೆ.[3]

ಕ್ರಿ.ಶ.1100ರ ಶಾಸನದಲ್ಲಿ ತ್ರಿಭುವನಮಲ್ಲನ ವಿಶಾಲವಕ್ಷಸ್ಥಳನಿವಾಸಿನಿಯಾದ ಮೈಳಲದೇವಿಯು ಕುಳಗೇರಿಯಲ್ಲಿದ್ದಳು. ಈಕೆ ದಾನ ನೀಡುವದರಲ್ಲಿ ದಾನ ಚಿಂತಾಮಣಿ ಎಂದೇ ಪ್ರಸಿದ್ಧಿ ಪಡೆದಿದ್ದಳು. ಅಂದರೆ ಶಾಸನಕವಿಯು ಮೈಳಲದೇವಿಯನ್ನು ದಾನ ಚಿಂತಾಮಣಿ ಎಂದೇ ಪ್ರಸಿದ್ಧಳಾದ ಅತ್ತಿಮಬ್ಬೆಗೆ ಹೋಲಿಸಿದ್ದಾಳೆ. ಕ್ರಿ.ಶ.1100ರ ಮತ್ತೊಂದು ಶಾಸನದಲ್ಲಿ ಯುವರಾಜ ಮಲ್ಲಿಕಾರ್ಜುನ ದೇವನು ಮೈಳಲದೇವಿಯ ಮಗ ಎಂದು ತಿಳಿಸುತ್ತದೆ.

ಕ್ರಿ.ಶ.1105ರ ಶಾಸನದ್ಲಲಿ ಉಲ್ಲೇಖವಾದ ಹಂಪಕವಿ(ನಾಗಚಂದ್ರ)ಗೂ ಮತ್ತು ಯುವರಾಜ ಮಲ್ಲಿಕಾರ್ಜುನನಿಗೂ ಹತ್ತಿರದ ಸಂಬಂಧವಿದೆ. ಮಲ್ಲಿಕಾರ್ಜುನ ದೊರೆಯ ಪುತ್ರ ಗೋವಿಂದ ಚಕ್ರವರ್ತಿಯೂ ಮಹಾಪ್ರಧಾನ, ಮನೆವೆರ್ಗ್ಗಡೆಯೂ ಆಗಿರುತ್ತಾನೆಂದು ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿದೆ ಎಂದು ಸೀತಾರಾಮ್ ಜಾಗಿರದಾರರು ತಿಳಿಸುತ್ತಾರೆ.[4]

ಇನ್ನು ಇದೇ ಗ್ರಾಮದಲ್ಲಿ ದೊರೆತ ಕ್ರಿ.ಶ.1113ರ ಶಾಸನವೂ ಬಹಳ ಮಹತ್ವದ್ದೆಂದು ಜಾಗಿರದಾರರು ಸಾಧಿಸಿ ತೋರಿಸಿದ್ದಾರೆ. ಸೇವುಣ ಚಕ್ರವರ್ತಿ ಇಮ್ಮಡಿ ಜೈತುಗಿಯು ಸಾಧಾರಣ ಸಂವತ್ಸರದಲ್ಲಿ ಪಟ್ಟಕ್ಕೆ

ಬಂದನೆಂದು ತಿಳಿಸುತ್ತದೆ. ಶಾಸನದಲ್ಲಿ "ಸೇವುಣ ಚಕ್ರವರ್ತಿ ಜಯಿತುಗಿದೇವವರ್ಷದ 2ನೇ ವಿರೋಧಿಕ್ರಿತು ಸಂವತ್ಸರ" ಎಂದಿದೆ.[5] ವಿರೋಧಿಕೃತ ಸಂವತ್ಸರವು ಜಯಿತುಗಿ ದೇವನ ಆಳ್ವಿಕೆಯ ಎರಡನೇ ವರ್ಷವಾದುದರಿಂದ ಆತ ಸಾಧಾರಣ ಸಂವತ್ಸರದಲ್ಲಿ ಪಟ್ಟಕ್ಕೆ ಬಂದನೆಂದು ಸ್ಫಟಿಕಶಲಾಕೆಯಷ್ಟು ಪಾರದರ್ಷಕವಾಗಿದೆ ಎಂದು ಜಾಗಿರದಾರರು ತಿಳಿಸುತ್ತಾರೆ.

ಇಂತಹುದೇ ಇನ್ನೊಂದು ಮಹತ್ವದ ಸಂಗತಿಯನ್ನು ಸೇವುಣರಿಗೆ ಸಂಬಂಧಿಸಿದಂತೆ ಜಾಗಿರದಾರರು ಹೊಸ ಬೆಳಕನ್ನು ಚೆಲ್ಲಿದ್ದಾರೆ. ಜೈತುಗಿ ವಂಶದಲ್ಲಿ ಬಂದ ಇಮ್ಮಡಿ ಜೈತುಗಿಯ ಎಂದರೆ ಸಿಂಗಣ ದೇವನ ಪುತ್ರನ ಪುತ್ರ ಸೇವುಣ ಚಕ್ರವರ್ತಿ ಮಹಾದೇವ (ಕ್ರಿ.ಶ.1260–1271) ದೊರೆಯನ್ನು ಚಾಳುಕ್ಯವಂಶದವನೆಂದು ಇಲ್ಲಿನ ಶಾಸನವೊಂದು ವರ್ಣಿಸಿದೆ. ಕ್ರಿ.ಶ.1265ರ ಶಾಸನದಲ್ಲಿ

"ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿ
ರಾಜಂ ಪರಮೇಸ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಸ್ವಸ್ತಿ
ಶ್ರೀ ಸಖವರ್ಷದ 1187ನೆಯ ಕ್ರೋಧನ ಸಂವತ್ಸರದ ಶ್ರೀಮತು ದ್ವಾರಾವತಿ
ಪುರವರಾಧೀಶ್ವರಂ ವಿಷ್ಣುವಂಶೋದ್ಭವಂ ಯದವ ಕುಳಕಮಳ ವಿಕಾಸ
ಭಾಸ್ಕರಂ ಯರಿರಾಯ ಜಗಜ್ಜಂಪ ಮಾಳವರಾಯಮದನ ತ್ರಿಣೇತ್ರ ಗುರ್ಜ್ಜ
ತಿರರಾಯಭಯಂಕರಂ ತೆಲುಂಗರಾಯ ಸ್ಥಾಪನಾಚಾರ್ಯ್ಯ ಯಿತ್ಯಾದಿನಾ
ಮಾವಳಿ ಪ್ರಶಸ್ತಿ ಸಹಿತಂ ಶ್ರೀಮತು ಭುಜಬಳ ಪ್ರೌಢಪ್ರತಾಪ ಚಕ್ರವರ್ತ್ತಿ
ಶ್ರೀಮತು ಮಹದೇವರಾಯ ರಾಜ್ಯೋದಯದಲು ದೇವಗಿರಿಯ ನೆಲವೀಡಿನೊಳು
ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ"[5] ಎಂದು ಉಲ್ಲೇಖಿಸಿದೆ.

ಚಳುಕ್ಯ ಹಾಗೂ ಸೇವುಣ ಎರಡೂ ರಾಜ ಮನೆತನದ ಪ್ರಶಸ್ತಿಗಳನ್ನು ಸೇರಿಸಿ ಹೇಳಿರುವುದರಿಂದ ತ್ರಿಭುವನಮಲ್ಲನ ತಮ್ಮ ಜಯಸಿಂಹನು ನೊಳಂಬವಂಶದ ರಾಣಿಯ ಉದರದಲ್ಲಿ ಜನಿಸಿದ ಹಾಗೆ ತ್ರಿಭುವನಮಲ್ಲನು ಗಂಗವಂಶದ ರಾಣಿಯ ಉದರದಲ್ಲಿ ಜನಿಸಿದನು. ಹಾಗೆಯೇ ಮಹದೇವ ಚಕ್ರವರ್ತಿಯು ಚಳುಕ್ಯವಂಶದ ರಾಜಕುಮಾರಿಯ ಉದರದಲ್ಲಿ ಜನಿಸಿದ್ದಾನೆ ಎಂದು ಜಾಗಿರದಾರರು ತಿಳಿಸುತ್ತಾರೆ. ಮಹದೇವ ಚಕ್ರವರ್ತಿಯ ತಾಯಿಯನ್ನು ಬಲ್ಲ ಆ ಕಾಲದ ಶಾಸನಕವಿಗಳು ಮಹದೇವ ಚಕ್ರವರ್ತ್ತಿಯನ್ನು ಚಳುಕ್ಯ ರಾಜಮನೆತನದ ಬಿರುದಾವಳಿಯಿಂದ ಪರಿಚಿಸಿದ್ದಾನೆ.


1. ಕಲಬುರ್ಗಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಮಹಾಪ್ರಬಂಧ): ಡಾ॥ ಎಂ.ಎಸ್.ಸಿರವಾಳ
2. ಕಲಬುರ್ಗಿ ಜಿಲ್ಲೆಯ ಶಾಸನಗಳು: ಶ್ರೀಮತಿ ಹನುಮಾಕ್ಷಿ ಗೋಗಿ
3. ಚಂದ್ರಗಂಗಾ(ಶ್ರೀ ಚಂದ್ರಕಾಂತ ಭಂಡಾರೆಯವರ ಅಭಿನಂದನ ಗ್ರಂಥ): ಕುಳಗೇರಿ ಶಾಸನಗಳು: ಸೀತಾರಾಮ್ ಜಾಗಿರದಾರ
4. ಚಂದ್ರಗಂಗಾ(ಶ್ರೀ ಚಂದ್ರಕಾಂತ ಭಂಡಾರೆಯವರ ಅಭಿನಂದನ ಗ್ರಂಥ): ಕುಳಗೇರಿ ಶಾಸನಗಳು: ಸೀತಾರಾಮ್ ಜಾಗಿರದಾರ
5. ಕಲಬುರ್ಗಿ ಜಿಲ್ಲೆಯ ಶಾಸನಗಳು: ಶ್ರೀಮತಿ ಹನುಮಾಕ್ಷಿ ಗೋಗಿ